# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ

# ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆಃ 133/2016

**ಪಿ.ಡಬ್ಲ್ಯೂಃ 5 (ಸಿಡಬ್ಲ್ಯೂಃ 10 )**

| | | |
|---|---|---|
| **ಸಾಕ್ಷಿದಾರರ ಹೆಸರು** | **:** | **ಶ್ರೀ ಅಮರೇಶ್** |
| **ತಂದೆಯ ಹೆಸರು** | **:** | **ತಿಪ್ಪಣ್ಣ** |
| **ವಯಸ್ಸು** | **:** | **30 ವರ್ಷ** |
| **ಕೆಲಸ** | **:** | **ವ್ಯವಸಾಯ** |
| **ವಾಸ ಸ್ಥಳ** | **:** | **ಹೊನ್ನಾಳಿ ಗ್ರಾಮ** |

**ಸಾಕ್ಷಿಯನ್ನು ದಿನಾಂಕ 26.11.2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

2 ನೇ ಆರೋಪಿಯ ಪರಿಚಯ ಇದೆ. ಅವರು ಗ್ರಾಮ ಪಂಚಾಯ್ತಿ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ. ನಾನು 2 ನೇ ಆರೋಪಿಗೆ ಜಾಮೀನುದಾರನಾಗಿದ್ದೇನೆ. ನಾನು ಜಾಮೀನುದಾರನಾಗಿ ಸಹಿ ಮಾಡಲು ಹೋಗಿದ್ದೇನೆ. ಲೋಕಾಯುಕ್ತ ಇನ್ಸಪೆಕ್ಟರ್ ರವರು 2 ನೇ ಆರೋಪಿಯ ಧ್ವನಿಯನ್ನು ಗುರುತಿಸಲು ನನಗೆ ಹೇಳಿಲ್ಲ ಮತ್ತು 2 ನೇ ಆರೋಪಿಯ ಮಾದರಿ ಧ್ವನಿಯ ಸಿಡಿಯನ್ನು ನನ್ನ ಸಮಕ್ಷಮದಲ್ಲಿ ತಯಾರಿಸಿಲ್ಲ. ನಿಪಿ.65 ರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು **ನಿಪಿ.65(ಬಿ)** ಎಂದು ಗುರುತಿಸಲಾಯಿತು.

***(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಮತ್ತು ಪಾಟಿ ಸವಾಲಿಗೆ ಒಳಪಡಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)***

**ಪಾಟಿ ಸವಾಲುಃ ವಿಶೇಷ ಸರ್ಕಾರಿ ಅಬಿಯೋಜಕರಿಂದಃ**

**Spl.C.No.133/2016**
**P.W. 5 (C.W.10)**
**Date : 26.11.2024**

**2.** ದಿಃ1.2.2016 ರಂದು ನಾನು ಲೋಕಯುಕ್ತ ಇನ್ಸಪೆಕ್ಟರ್ ರವರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. 2 ನೇ ಆರೋಪಿ ಸುಮಲತಾ ರವರ ಕೋರಿಕೆಯ ಮೇರೆಗೆ ನಾನು ಆಕೆಯೊಂದಿಗೆ ಲೋಕಾಯುಕ್ತ ಕಚೇರಿಗೆ ಹೋಗಿದ್ದು , ಸುಮಲತಾ ರವರ ಧ್ವನಿ ಸಂಗ್ರಹಣೆ ಕಾಲಕ್ಕೆ ಮಾಡಿದ ಪಂಚನಾಮೆ ಕಾಲದಲ್ಲಿ ನಾನು ಹಾಜರು ಇದ್ದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಪಂಚನಾಮೆ ಕಾಲಕ್ಕೆ ಸುಮಲತಾ ರವರ ಮಾದರಿ ಧ್ವನಿಯನ್ನು ತೆಗೆದುಕೊಂಡರು ಎನ್ನುವುದು ಸರಿಯಲ್ಲ.

3. ಪಂಚನಾಮೆ ಕಾಲಕ್ಕೆ ಸುಮಲತಾ ರವರು ಮಾತನಾಡಿದ ಧ್ವನಿಯ ಪ್ರತಿಲೇಖವನ್ನು 2 ಬಾರಿ ಓದಿಸಿದ್ದಾರೆ ಎನ್ನುವುದು ಸರಿಯಲ್ಲ. ಆಕೆ ಓದಿದ ಧ್ವನಿಯನ್ನುವಾಯ್ಸ ರೆಕಾರ್ಡ್ ನಲ್ಲಿ ದಾಖಲು ಮಾಡಿಕೊಂಡು ನಂತರ ಸಿಡಿಯಾಗಿ ಪರಿವರ್ತನೆ ಮಾಡಿದರು ಎನ್ನುವುದು ಸರಿಯಲ್ಲ. ಸದರಿ ಸಿಡಿಗೆ ಆರ್ಟಿಕಲ್ 11 ಎಂದು ಗುರುತು ನೀಡಿದ್ದಾರೆ ಎನ್ನುವುದು ಸರಿಯಲ್ಲ. ಆಗ ಬರೆದ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಈ ಮೇಲಿನಂತೆ ನಾನು ಪೊಲೀಸರ ಮುಂದೆ **ನಿಪಿ.69** ರಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. 2 ನೇ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರಃವಕೀಲರಿಂದಃ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**